RNU AIR DHARWAD

JULY 26, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಇಂದು, ಕಾರ್ಗಿಲ್ ವಿಜಯ ದಿನ.** ನಮ್ಮ ಸೈನಿಕರ ಅಸಾಧಾರಣ ಧೈರ್ಯ ಹಾಗೂ ಶೌರ್ಯವನ್ನು 'ಕಾರ್ಗಿಲ್ ವಿಜಯ ದಿವಸ್' ನೆನಪಿಸುತ್ತದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಆಕಾಶವಾಣಿಯ ಜನಪ್ರಿಯ ಮನ್ ಕಿ ಬಾತ್ ನ –136 ನೇ ಆವೃತ್ತಿಯಲ್ಲಿ, ದೇಶ, ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾರ್ಗಿಲ್ ನ ಎತ್ತರವಾದ ಶಿಖರಗಳು, ಪ್ರತಿಕೂಲ ಹವಾಮಾನ, ಶತ್ರುಗಳ ತೀವ್ರ ಸವಾಲುಗಳು ನಮ್ಮ ಯೋಧರ ಮುಂದಿದ್ದವು. ಆದರೆ ಅವರ ಅಚಲ ಧೈರ್ಯ, ಅಸಾಧಾರಣ ಶೌರ್ಯ ಹಾಗೂ ದೇಶಭಕ್ತಿಯ ಸಂಕಲ್ಪವು ಪ್ರತಿಯೊಂದು ಸವಾಲಿಗಿಂತಲೂ ಎತ್ತರವಾಗಿ ನಿಂತಿತು ಎಂದರು. 'ಕಾರ್ಗಿಲ್ ವಿಜಯ ದಿವಸ' ದಂದು, ಎಲ್ಲ ವೀರ ಸೈನಿಕರಿಗೆ ಹಾಗೂ ಹುತಾತ್ಮರಿಗೆ ಶ್ರದ್ಧೆಯಿಂದ ನಮಿಸುವುದಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.  ಇಂದು ಭಾರತವು ಸೈನಿಕರ ಸಾಹಸದ ಜೊತೆಗೆ, ತನ್ನ ತಾಂತ್ರಿಕ ಸಾಮರ್ಥ್ಯವನ್ನು ನಿರಂತರವಾಗಿ ಬಲಪಡಿಸುತ್ತಿದೆ ಎಂದರು.

<><><>

**ಕಾರ್ಗಿಲ್ ವಿಜಯ ದಿನದ ಹಿನ್ನೆಲೆ,** ಕಾರ್ಗಿಲ್ ಯುದ್ಧದ ಅಮರ ವೀರರಿಗೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಮ್ಮ ಗೌರವ ನಮನಗಳನ್ನು ಸಲ್ಲಿಸಿದ್ದಾರೆ. ದೇಶ ಕಾಯುವ ಸೈನಿಕರ ತ್ಯಾಗ ಹಾಗೂ ಸೇವೆಯು ಸದಾ ಸ್ಮರಣೀಯ ಎಂದು ತಮ್ಮ ಎಕ್ಸ್ ಖಾತೆ ಮೂಲಕ ತಿಳಿಸಿದ್ದಾರೆ.

<><><>

**ಧಾರವಾಡದಲ್ಲಿ ಜಿಲ್ಲಾಡಳಿತ** ಹಾಗೂ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ, ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಹುತಾತ್ಮ ಯೋಧರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಕಚೇರಿ ಸಮೀಪದ ಕಾರ್ಗಿಲ್ ಸ್ತೂಪದಲ್ಲಿ, ಜಿಲ್ಲಾಧಿಕಾರಿ ಆರ್. ಸ್ನೇಹಲ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಸದಸ್ಯರು, ವಿವಿಧ ಶಾಲಾ ವಿದ್ಯಾರ್ಥಿಗಳು ಹುತಾತ್ಮ ವೀರಯೋಧರಿಗೆ ಗೌರವ ನಮನ ಸಲ್ಲಿಸಿದರು.

<><><>

**ಭಾರತೀಯ ರೇಲ್ವೆ ಇಲಾಖೆ ಅಧೀನದ** ರೈಲುಗಳಲ್ಲಿ ಬಯೋ ಟಾಯ್ಲೆಟ್ ಪರಿಚಯಿಸಿರುವ ಹಿನ್ನೆಲೆ, ಸ್ವಚ್ಛತೆ ಹಾಗೂ ನೈರ್ಮಲ್ಯದಲ್ಲಿ ಗಮನಾರ್ಹ ಸುಧಾರಣೆಯಾಗಿದೆ ಎಂದು ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ಬೆಂಗಳೂರಿನ ವಿಭಾಗೀಯ ರೇಲ್ವೆ ಕಚೇರಿಯಲ್ಲಿ, ಬೆಂಗಳೂರು ಅಭಿವೃದ್ಧಿ ಖಾತೆ ಸಚಿವ ಕೃಷ್ಣ ಬೈರೇಗೌಡ, ಜಂಟಿ ಅಧ್ಯಕ್ಷತೆಯಲ್ಲಿ ಜರುಗಿದ ರೇಲ್ವೆ ಭೂಮಿ ಹಾಗೂ ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಕುರಿತ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಇಲಾಖೆಗಳ ನಡುವೆ ಪರಸ್ಪರ ಸಮನ್ವಯ ಅಗತ್ಯ ಎಂದರು. ಬೆಂಗಳೂರಿನಲ್ಲಿ,

ತ್ಯಾಜ್ಯ ಮುಕ್ತತೆ ಉದ್ದೇಶದಿಂದ ಆಗಸ್ಟ್ 1 ರಿಂದ, ಒಂದು ತಿಂಗಳ ಕಾಲ ಸ್ವಚ್ಛತಾ ಅಭಿಯಾನ ಆರಂಭಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

<><><>

**ಹೊಸಪೇಟೆ ನ್ಯಾಯಾಲಯದ** ಆವರಣದಲ್ಲಿ, ನೂತನ ವಿಜಯನಗರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವನ್ನು, ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಪ್ರದೀಪ ಸಿಂಗ ಯರೂರ ಉದ್ಘಾಟಿಸಿದರು.

<><><>

**ಕರ್ನಾಟಕ ರೈತ ಸುರಕ್ಷೆ;** ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅಡಿ, ಪ್ರಸಕ್ತ ಮುಂಗಾರು ಹಂಗಾಮಿಗೆ, ರೈತರು ಹೆಸರು ನೋಂದಾಯಿಸಲು, ಈ ತಿಂಗಳ 31 ಕೊನೆಯ ದಿನವಾಗಿದೆ.

<><><>

**ಮತದಾರರ ಪಟ್ಟಿ ವಿಶೇಷ ಸಮಗ್ರ** ಪರಿಷ್ಕರಣೆ ಹಿನ್ನೆಲೆ, ಬೀದರ ಜಿಲ್ಲೆಯ ಒಟ್ಟು 6 ವಿಧಾನಸಭಾ ಕ್ಷೇತ್ರಗಳಲ್ಲಿ, 9 ಲಕ್ಷ 40 ಸಾವಿರದ 4 ನೂರಾ 23 ಅರ್ಜಿಗಳು ಸ್ವೀಕೃತಗೊಂಡಿವೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>